# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.

ಸಿ.ಸಿ. ನಂ: 164/2015 ಸಿಡಬ್ಲ್ಯೂ: 9 ಪಿಡಬ್ಲ್ಯೂ: 6

ಪ್ರಮಾಣವಚನ ಬೋಧಿಸಲಾಯಿತು ದಿ: 26-11-2025

ಹೆಸರು : ಪ್ರವೀಣ್ ಕುಮಾರ್

ತಂದೆ ಹೆಸರು : ರಮೇಶ್ ರಾವ್

ವಯಸ್ಸು : 67 ವರ್ಷ

ಉದ್ಯೋಗ : ನಿವೃತ್ತ ಸರ್ಕಾರಿ ನೌಕರರು

ವಾಸಸ್ಥಳ : ಕಲಬುರಗಿ

**:ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ:**

ನಾನು ಸನ್ 2013 ರಿಂದ 2019 ವರೆಗೂ ಸಹಾಯಕ ಕೃಷಿ ನಿರ್ದೇಶಕರಾಗಿ , ಕೃಷಿ ನಿರ್ದೇಶಕರ ಕಾರ್ಯಾಲಯ ಸೇಡಂ ನಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ. 04-09-2014 ರಂದು ಚಾಸಾ 10 ರವರು ಬೆಳೆ ನಾಶ ಆಗಿದೆ ಆ ನಾಶ ಯಾವಕಾರಣಕ್ಕಾಗಿ ಆಗಿದೆ ಎಂದು ಅಭಿಪ್ರಾಯ ಕೇಳಿದರು. ಆಗ ನಾನು ಮತ್ತು ಕೃಷಿ ವಿಜ್ಞಾನ ಕೇಂದ್ರ ರದ್ದೇವಾಡಿ ಯಲ್ಲಿರುವ ವಿಜ್ಞಾನಿಗಳೊಂದಿಗೆ ಘಟನೆ ಸ್ಥಳಕ್ಕೆ ಹೋಗಿ ಪರಿಶೀಲಿಸಿದಾಗ ಘಟನಾ ಸ್ಥಳದಲ್ಲಿ ಸಂಪೂರ್ಣ ಬೆಳೆಗಳು ಅಂದಾಜು ಶೇಕಡ 80 ರಷ್ಟು ಬೆಳೆಗಳು ಉದುರಿ ಬಿದ್ದಿತ್ತು. ಸದರಿ ಬೆಳೆಗಳು ರಾಸಾಯನಿಕ ಕಳೆ ನಾಶಕ ಸಿಂಪಡೆ ಮಾಡಿದ್ದರಿಂದ ಆಗಿತ್ತು. ಆದ್ದರಿಂದ ಬೆಳೆ ಇಳುವರಿ ಬರುವುದಿಲ್ಲ ಎಂದು ಅಭಿಪ್ರಾಯ ನೀಡಿರುತ್ತೇನೆ. ಸಾಕ್ಷಿಯು ಸದರಿ ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿ ಪಿ 4 ಎಂದು ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ ಪಿ 4(ಎ) ಎಂದು ಗುರುತಿಸಲಾಯಿತು.

**ಪಾಟೀಸವಾಲು:** ಆರೋಪಿ ಪರ ಶ್ರೀ ಬಿ ಟಿ ವಕೀಲರಿಂದ:

ನಾನು ರದ್ದೆವಾಡಿಯಿಂದ ಕೋಡ್ಲಾ ಗ್ರಾಮದ ಸೀಮಾಂತರದಲ್ಲಿರುವ ಸರ್ವೆ ನಂ.643 ಗೆ ಹೋಗಿದ್ದೆವು. ನಾವು ಅಲ್ಲಿಂದ ಗಿಡಗಳು ಪರೀಕ್ಷೆಗಾರಿ ನಮ್ಮ ಜೊತೆಯಲ್ಲಿ ಹೋಯಿದಿಲ್ಲ. ನಾವು ಅಲ್ಲಿ ಯಾವುದೇ ಪಂಚನಾಮೆಯನ್ನು ಮಾಡಿಲ್ಲ ಹಾಗೂ ಯಾರಿಗೂ ಕರೆದಿಲ್ಲ. ಸದರಿ ಕಳೆ ನಾಶಕ ಯಾವ ಕಂಪನಿಯದು ಎಂದು ಹೇಳಲು ಬರುವುದಿಲ್ಲ.

ದಿ. 04-09-2014 ರಂದು ಚಾಸಾ 10 ರವರು ಬೆಳೆ ನಾಶ ಆಗಿದೆ ಆ ನಾಶ ಯಾವಕಾರಣಕ್ಕಾಗಿ ಆಗಿದೆ ಎಂದು ಅಭಿಪ್ರಾಯ ಕೇಳಿದರು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ಆಗ ನಾನು ಮತ್ತು ಕೃಷಿ ವಿಜ್ಞಾನ ಕೇಂದ್ರ ರದ್ದೇವಾಡಿ ಯಲ್ಲಿರುವ ವಿಜ್ಞಾನಿಗಳೊಂದಿಗೆ ಘಟನೆ ಸ್ಥಳಕ್ಕೆ ಹೋಗಿ ಪರಿಶೀಲಿಸಿದಾಗ ಘಟನಾ ಸ್ಥಳದಲ್ಲಿ ಸಂಪೂರ್ಣ ಬೆಳೆಗಳು ಅಂದಾಜು ಶೇಕಡ 80 ರಷ್ಟು ಬೆಳೆಗಳು ಉದುರಿ ಬಿದ್ದಿತ್ತು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ಸದರಿ ಬೆಳೆಗಳು ರಾಸಾಯನಿಕ ಕಳೆ ನಾಶಕ ಸಿಂಪಡೆ ಮಾಡಿದ್ದರಿಂದ ಆಗಿತ್ತು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ಆದ್ದರಿಂದ ಬೆಳೆ ಇಳುವರಿ ಬರುವುದಿಲ್ಲ ಎಂದು ಅಭಿಪ್ರಾಯ ನೀಡಿರುತ್ತೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ.

ಮರುವಿಚಾರಣೆಃ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ. ಇದೆ.**

**ಪ್ರ. ದ. ನ್ಯಾ. ದಂ. ಸೇಡಂ.**